ಸಂದರ್ಶನ: ವಿಶಾಖ ಎನ್‌

# ಬಿ.ಎಲ್. ವೇಣು

## ಸಾಹಿತ್ಯ ನಾವೆಯೊಳಗೆ ಸಿನಿಮಾ ಹರಿಗೋಲು

ಎಪ್ಪತ್ತೈದು ವರ್ಷ ತುಂಬಿದ ಗಟ್ಟಿ ದೇಹ. ಕೊರೊನಾ ಕಾಲದಲ್ಲೂ ನಿರ್ಭಿಡೆಯಿಂದ ಹಸ್ತಲಾಘವಕ್ಕೆ ಕೈಚಾಚುವ ಆದರಣೀಯ ಸ್ವಭಾವ. ಸ್ಮೃತಿಪಟಲವಂತೂ ತುಂಬಾ ಫ್ರೆಷ್‌ ನೆನಪಿನ ಆಳಕ್ಕೆ ಪಾತಾಳಗರಡಿ ಹಾಕುವುದೆಂದರೆ ಅವರಿಗೆ ಪುಳಕ. ಕಾದಂಬರಿಕಾರ–ಕತೆಗಾರ–ಸಿನಿಮಾ ಸಂಭಾಷಣೆಗಾರ–ನಾಟಕಕಾರ–ರಂಗನಟ ಹೀಗೆ ಬಹುಮುಖ ಪ್ರತಿಭೆಯಾಗಿ ದಶಕಗಟ್ಟಲೆ ಕೃತಿಕಾಣ್ಕೆ ನೀಡಿರುವ ಬಿ.ಎಲ್‌ ವೇಣು ಅವರನ್ನು ಕಂಡರೆ ಚಿತ್ರದುರ್ಗದ ಮಣ್ಣಿನ ಗುಣ ಅರ್ಥವಾದೀತು. ಮಾತು ಖಡಕ್‌ ಅಲ್ಲಲ್ಲಿ ಬಂಡಾಯಪ್ರಜ್ಞೆ. ಸಿನಿಮಾದ ಕೊಳದಲ್ಲಿದ್ದೂ ತಾವರೆಯಂತೆ ದೀರ್ಘ ಕಾಲ ಏಗಿದ್ದನ್ನು ಇಂಚಿಂಚಾಗಿ ಹೇಳಿಕೊಳ್ಳುವ ಉತ್ಸಾಹ.
ವೇಣು ದೀರ್ಘಾವಧಿ ಮಾತಿಗೆ ತೆರೆದುಕೊಂಡರು.

ಚಿತ್ರಗಳು: ಭವಾನಿ ಮಂಜು

